**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.**

ಸಿ.ಸಿ.ಃ 48/2016

ಪಿ. ಡಬ್ಲ್ಯು: 02
ಸಿ. ಡಬ್ಲ್ಯು: 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬೆಟ್ಟೇಗೌಡ |
| ತಂದೆ/ಪತಿಯ ಹೆಸರು | ಃ | ಕುಂಟೇಗೌಡ |
| ವಯಸ್ಸು | ಃ | 58 ವರ್ಷ |
| ವೃತ್ತಿ | ಃ | ಪ್ಯಾಕ್ಟರಿಯಲ್ಲಿ ಕೆಲಸ |
| ವಾಸ | ಃ | ಹೊಸಆನಂದೂರು ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 01.08.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ರಿಂದ 3 ಗೊತ್ತು. ಆರೋಪಿ ಗೊತ್ತಿಲ್ಲ. ಮೃತ ಶಿವಣ್ಣ ಗೊತ್ತು. ಆತ ನಮ್ಮ ಗ್ರಾಮದವರು. ಆತ ಅಪಘಾತದಿಂದ ಮೃತಪಟ್ಟಿರುತ್ತಾರೆ.

ಸುಮಾರು 6-7 ವರ್ಷಗಳ ಹಿಂದೆ ಬೆಳಿಗ್ಗೆ 08.00-09.00 ಸಮಯದಲ್ಲಿ ಪಂಪ್ ಹೌಸ್ ಸರ್ಕಲ್ ಹತ್ತಿರ ಅಪಘಾತವಾಗಿತ್ತು. ಅಪಘಾತ ಬೈಕ್ ಮತ್ತು ಲಾರಿ ಮಧ್ಯೆ ಆಗಿತ್ತು. ಲಾರಿ ಬೈಕ್ ಗೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಯಿತು ಎಂದು ನನಗೆ ಗೊತ್ತಾಯಿತು. ನನ್ನ ಸಮಕ್ಷಮ ಅಪಘಾತವಾಗಿರುವುದಿಲ್ಲ. ಆರೋಪಿ ಲಾರಿಯನ್ನು ಚಲಾಯಿಸಿ ಅಪಘಾತ ಮಾಡಿದ್ದನ್ನು ನಾನು ನೋಡಿಲ್ಲ. ನಾನು ಅಪಘಾತ ಸಂಬಂಧ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ನಾನು ಮೈಸೂರಿನ ಮೈ ಪಾಲ್ ನಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ದಿಃ 01.09.2015 ರಂದು ಬೆಳಿಗ್ಗೆ 08.00 ಪಂಪ್ ಹೌಸ್ ಸರ್ಕಲ್ ಬಳಿ ಬಸ್ ಗೆ ಕಾಯುತ್ತಾ

ನಿಂತಿದ್ದೆ ಆಗ ಬೆಳಿಗ್ಗೆ 08.00 ಸಮಯದಲ್ಲಿ ನರಸಿಂಹೇಗೌಡರ ಮಗ ಶಿವಣ್ಣ ಹಾಗೂ ಕಾಂತರಾಜು ರವರು ಪಂಪ್ ಹೌಸ್ ನ ಪೆಟ್ರೋಲ್ ಬಂಕ್ ಹತ್ತಿರ ಮುಂಭಾಗವಿರುವ ರಸ್ತೆಯ ಎಡಭಾಗದಲ್ಲಿ ಟಿವಿಎಸ್ ಮೊಪೈಡ್ ವಾಹನವನ್ನು ನಿಲ್ಲಿಸಿಕೊಂಡು ಮಾತನಾಡುತ್ತಾ ನಿಂತಿದ್ದರು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಮೈಸೂರು ಕಡೆಯಿಂದ ಒಂದು ಟಿಪ್ಪರ್ ಲಾರಿಯನ್ನು ಅದರ ಚಾಲಕ ಮೈಸೂರು ಕಡೆಯಿಂದ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಕೆ.ಆರ್.ಸಾಗರ ದ ಕಡೆಗೆ ಓಡಿಸಿಕೊಂಡು ಬಂದು ಟಿವಿಎಸ್ ಮೊಪೈಡ್ ಅನ್ನು ನಿಲ್ಲಿಸಿಕೊಂಡು ನಿಂತಿದ್ದ ಶಿವಣ್ಣನಿಗೆ ಡಿಕ್ಕಿ ಪಡಿಸಿದ ಎಂದರೆ ಸುಳ್ಳು. ಡಿಕ್ಕಿ ಪಡಿಸಿದ್ದರಿಂದ ಶಿವಣ್ಣ ನವರು ಕೆಳಗೆ ಬಿದ್ದು ಹೋಗಿದ್ದು ಲಾರಿಯ ಚಕ್ರ ಆತನ ತಲೆಯ ಮೇಲೆ ಹರಿಯಿತು ಎಂದರೆ ಸುಳ್ಳು. ಟಿಪ್ಪರ್ ಲಾರಿ ಚಾಲಕ ಲಾರಿಯನ್ನು ಸ್ವಲ್ಪ ಮುಂದೆ ಓಡಿಸಿಕೊಂಡು ಹೋಗಿ ಲಾರಿ ಚಾಲನೆಯಲ್ಲಿ ಇರುವಾಗಲೇ ಅದರಿಂದ ಜಿಗಿದ್ದು ಓಡಿ ಹೋದ ಎಂದರೆ ಸುಳ್ಳು. ಆಗ ಲಾರಿ ಅಲ್ಲಿನ ಕ್ರೀಮ್ ಲ್ಯಾಂಡ್ ಬೇಕರಿ ಮುಂಭಾಗದ ಕಂಬಕ್ಕೆ ಡಿಕ್ಕಿ ಮಾಡಿ ನಿಂತುಕೊಂಡಿತ್ತು ಎಂದರೆ ಸುಳ್ಳು. ಆಗ ಅಲ್ಲೇ ಇದ್ದ ನಾನು, ಶ್ರೀನಿವಾಸ, ಬಸವರಾಜು ಹಾಗೂ ರಮೇಶ್ ಹೋಗಿ ನೋಡಲಾಗಿ ಶಿವಣ್ಣನ ತಲೆ ಜಜ್ಜಿ ಹೋಗಿದ್ದು ಆತನ ಎಡಭಾಗದ ಬೆನ್ನಿನ ಮೇಲೆ ಮತ್ತು ಎಡಕಾಲಿನಲ್ಲಿ ತರಚಿದ ಗಾಯಗಳಾಗಿ ಎಡತೋಳಿನಲ್ಲಿ ಸೀಳಿದ ಗಾಯವಾಗಿ ತೀವ್ರ ರಕ್ತಸ್ರಾವ ದಿಂದ ಸ್ಥಳದಲ್ಲಿ ಸತ್ತು ಹೋದರು ಎಂದರೆ ಸುಳ್ಳು. ಟಿವಿಎಸ್ ಮೊಪೈಡ್ ನಂಃ ಕೆಎ-11-ಕೆ-9704 ಆಗಿದ್ದು ಅದರ ಬಲಭಾಗದ ಬಂಪರ್ ಹೆಡ್ ಲೈಟ್ ಡೋಮ್ ಹೊಡೆದು ಜಖಂಗೊಂಡಿತ್ತು ಎಂದರೆ ಸುಳ್ಳು. ಟಿಪ್ಪರ್ ಲಾರಿ ಸಂಃ ಕೆಎ-09-ಬಿ-6428 ಆಗಿದ್ದು ಅದರ ಎಡಭಾಗದ ಬಂಪರ್ ಕೂಡ ಜಖಂಗೊಂಡಿತ್ತು ಎಂದರೆ ಸುಳ್ಳು. ಲಾರಿ ಚಾಲಕನನ್ನು ಮತ್ತು ಲಾರಿಯನ್ನು ನೋಡಿದರೆ ಗುರುತಿಸುತ್ತೇನೆಂದು ಅಪಘಾತ ಸಂಬಂಧ ನಾನು ಪೋಲೀಸರಿಗೆ ಈಗ ಓದಿ ಹೇಳಿದ ರೀತಿ ನೀಡಿದ್ದೇನು ಎಂದರೆ ಸುಳ್ಳು. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು.

ಅಪಘಾತ ನನ್ನ ಸಮಕ್ಷಮ ಆಗಿದ್ದು ಅಪಘಾತ ಆರೋಪಿಯ ತಪ್ಪಿನಿಂದ ಆಗಿದ್ದರೂ ಕೂಡ ನನ್ನ ಸಮಕ್ಷಮ ಅಪಘಾತ ವಾಗಿಲ್ಲವೆಂದು ಮತ್ತು ಅಪಘಾತ ಆರೋಪಿಯ ತಪ್ಪಿನಿಂದ ಆಗಿಲ್ಲವೆಂದು ಹಾಗೂ ಅಪಘಾತ ಸಂಬಂಧ ನಾನು ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು: ಆರೋಪಿ ಪರ ವಕೀಲರಿಂದ</u>**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.